
# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

62 ಸಂಭ್ರಮ
1959-2021

# ಶೇ: 5.5%

## ವಾರ್ಷಿಕ ನಿವ್ವಳ ಬಡ್ಡಿದರ ಸಹಾಯಧನ ಯೋಜನೆ

**ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಉತ್ಪಾದನಾ ಉದ್ಯಮಗಳು ಹಾಗೂ ಉತ್ಪಾದನಾ ಸಂಬಂಧಿತ ಸೇವಾ ಚಟುವಟಿಕೆಗಳು ಅರ್ಹವಾಗಿವೆ.**



**ನಿಮ್ಮ ಪ್ರಗತಿಯ ಪಾಲುದಾರ**

# ನವೀಕೃತ ಶೇ.5.5ರ ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉತ್ಪಾದನಾ ಘಟಕಗಳಿಗೆ ಹಾಗೂ ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳಲ್ಲಿ ತೊಡಗುವ ಘಟಕಗಳಿಗೆ ಬಡ್ಡಿ ಸಹಾಯಧನ ಯೋಜನೆ:

## ಉದ್ದೇಶ:

ಕರ್ನಾಟಕ ಸರ್ಕಾರವು ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳು ಸಮಂಜಸವಾದ ಬಡ್ಡಿದರದಲ್ಲಿ ಸಾಂಸ್ಥಿಕ ಸಾಲವನ್ನು ಪಡೆಯಲು ಎದುರಿಸುತ್ತಿರುವ ತೊಂದರೆಗಳನ್ನು ಪರಿಗಣಿಸಿ ರಾಜ್ಯದ ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳಿಗೆ ಬಡ್ಡಿ ಸಹಾಯಧನ ಯೋಜನೆಯನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ 1ನೇ ಅಕ್ಟೋಬರ್ 2018 ರಿಂದ ಅನ್ವಯವಾಗುವಂತೆ ಜಾರಿಗೊಳಿಸಿದೆ. ತದನಂತರ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಅನುಕೂಲವಾಗುವಂತೆ 2020–21ರಲ್ಲಿ ಸೂಕ್ತವಾಗಿ ಮಾರ್ಪಾಡಿಸಲಾಯಿತು.

## ಅರ್ಹತೆ:

- ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಏಕಸ್ವಾಮ್ಯ, ಪಾಲುದಾರಿಕೆ, ಕಂಪನಿ ಮತ್ತು ಇತರೆ ಕಾನೂನಾತ್ಮಕ ಸಂಸ್ಥೆಗಳು.
- ಯೋಜನೆಯು ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಹೊಸ ಉತ್ಪಾದನಾ ಘಟಕಗಳಿಗೆ ಹಾಗೂ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಘಟಕಗಳ ವಿಸ್ತರಣೆ/ ಆಧುನಿಕರಣ/ತಾಂತ್ರಿಕ ಉನ್ನತೀಕರಣಕ್ಕೆ ನೇರವಾಗಿ ಉತ್ಪಾದನೆಗೆ ತೊಡಗಿಸುವ ಕಟ್ಟಡ ಹಾಗೂ ಯಂತ್ರೋಪಕರಣಗಳ (*Gross Block ಪರಿಗಣಿಸಿ) ಹೊಸ ಹೂಡಿಕೆಗೆ ಅನ್ವಯಿಸುತ್ತದೆ.
- ಈ ಯೋಜನೆಯಡಿಯಲ್ಲಿ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಗಳಿಂದ (KIADB/KSSIDC) ಹಾಗೂ ಇತರೆ ಸರ್ಕಾರದ ಸ್ವಾಮ್ಯದ ಭೂಮಿ ಖರೀದಿಗೆ ಅನ್ವಯಿಸುವುದಿಲ್ಲ.
- ಕರ್ನಾಟಕ ಸರ್ಕಾರ/ ಭಾರತ ಸರ್ಕಾರದ ಯಾವುದೇ ಯೋಜನೆಯಡಿ ಘಟಕಗಳು ಈಗಾಗಲೇ ಬಡ್ಡಿ ಸಹಾಯಧನ ಸೌಲಭ್ಯ ಪಡೆದುಕೊಂಡಿದ್ದಲ್ಲಿ ಅಂತಹ ಘಟಕಗಳು ಪುನ: ಈ ಯೋಜನೆಯಡಿಯಲ್ಲಿ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಅನರ್ಹರಾಗಿರುತ್ತಾರೆ.
- ಸಾಲ ವಿತರಣೆಯಾದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾತ್ರ ಶೆ. 5.5ರ ವಾರ್ಷಿಕ ಬಡ್ಡಿ ಸಹಾಯಧನವು ಲಭ್ಯವಿರುತ್ತದೆ (ಸಾಲ ಮರುಪಾವತಿಯು 5 ವರ್ಷಕ್ಕಿಂತ ಹೆಚ್ಚಾದ್ದಲ್ಲಿ ಆ ಅವಧಿಗೆ ಸಂಸ್ಥೆಯಿಂದ ವಿಧಿಸುವ ಕರಾರು ಬಡ್ಡಿದರ ಅನ್ವಯಿಸುತ್ತದೆ.)

## ಸಾಲದ ಮೊತ್ತ:

- ಕನಿಷ್ಟ ಸಾಲದ ಮೊತ್ತ ರೂ.5.00 ಲಕ್ಷ.
- ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉತ್ಪಾದನಾ ಘಟಕಗಳಿಗೆ ಗರಿಷ್ಟ ರೂ.500.00 ಲಕ್ಷ.
- ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳಲ್ಲಿ ತೊಡಗಿರುವ ಘಟಕಗಳಿಗೆ ಗರಿಷ್ಟ ರೂ.200.00 ಲಕ್ಷ.

ನೇರವಾಗಿ ಉತ್ಪಾದನೆಗೆ ತೊಡಗಿಸುವ ಕಟ್ಟಡ ಹಾಗೂ ಯಂತ್ರೋಪಕರಣಗಳ ಹೂಸ ಹೂಡಿಕೆಗಾಗಿ (*Gross Block) ಗರಿಷ್ಟ ಮಿತಿಯನ್ನು ದಾಟಿದ ಸಾಲದ ಮೇಲೆ ಚಾಲ್ತಿಯಲ್ಲಿರುವ ಕರಾರು ಬಡ್ಡಿದರ ಅನ್ವಯವಾಗುತ್ತದೆ.

## ಬಡ್ಡಿದರ :

- ಸಂಸ್ಥೆಯು ಚಾಲ್ತಿಯಲ್ಲಿರುವ ಕರಾರು ಬಡ್ಡಿ ದರ ಅನ್ವಯವಾಗುವಂತೆಯೇ ಸಾಲವನ್ನು ಮಂಜೂರು ಮಾಡಲಿದ್ದು ಅದರಂತೆಯೇ ಪ್ರವರ್ತಕರು ಮರುಪಾವತಿ ಮಾಡಬೇಕಾಗುತ್ತದೆ. ಫಲಾನುಭವಿಗಳು ನೀಡಬೇಕಾದ ನಿವ್ವಳ ಬಡ್ಡಿದರವು ಸಂಸ್ಥೆಯಿಂದ ವಿಧಿಸುವ ಕರಾರು ಬಡ್ಡಿದರ ಹಾಗೂ ಕರ್ನಾಟಕ ಸರ್ಕಾರದ ಶೇ.5.5ರ ಬಡ್ಡಿ ಸಹಾಯಧನದ ವ್ಯತ್ಯಾಸವಾಗಿರುತ್ತದೆ. (ವಿಳಂಬದ ಮರುಪಾವತಿಗೆ ರಿಯಾಯಿತಿ ಇರುವುದಿಲ್ಲ). ಈ ಯೋಜನೆಯಲ್ಲಿ ಸರ್ಕಾರದ ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಸಂಸ್ಥೆಯ ಎಲ್ಲಾ ಸಾಲದ ಕಂತುಗಳನ್ನು ನಿಯಮಿತವಾಗಿ ಮರುಪಾವತಿ ಮಾಡುತ್ತಿರಬೇಕು.

## ನಿಬಂಧನೆ ಮತ್ತು ಷರತ್ತುಗಳು:

ಉದ್ದಿಮೆದಾರರ ಬಂಡವಾಳ, ಈಕ್ವಿಟಿ ಅನುಪಾತ, ಅವಶ್ಯಕ ಭದ್ರತೆ, ಯೋಜನೆಯ ಕಾರ್ಯ ಸಾಧ್ಯತೆ ಇನ್ನಿತರೆ ನಿಬಂಧನೆಗಳು ಮತ್ತು ಷರತ್ತುಗಳು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಸಾಲ ನೀತಿಯಲ್ಲಿರುವಂತೆ ಅನ್ವಯಿಸುತ್ತದೆ.

ಯೋಜನೆಗೆ ಅನರ್ಹ ಘಟಕಗಳು/ಚಟುವಟಿಕೆಗಳು:

- ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮತ್ತು ಮಹಿಳಾ ಉದ್ದಿಮೆದಾರರಿಂದ ಸ್ಥಾಪಿಸಲ್ಪಟ್ಟು ರಾಜ್ಯ ಸರ್ಕಾರದ / ಭಾರತ ಸರ್ಕಾರದ ಯೋಜನೆಗಳಡಿಯಲ್ಲಿ ಬಡ್ಡಿ ಸಹಾಯಧನ ಪಡೆದ ಘಟಕಗಳು.
- ಅನ್ಯ ಬ್ಯಾಂಕುಗಳು / ಅನ್ಯ ಬ್ಯಾಂಕಿಂಗ್ ಹಣಕಾಸು ಕಂಪನಿಗಳು / ಖಾಸಗಿ ಬಂಡವಾಳದಾರರಿಂದ ಪಡೆದ ಸಾಲ ಹಾಗೂ ಸಂಸ್ಥೆಯಿಂದ ಈಗಾಗಲೇ ಪಡೆದಿರುವ ಸಾಲಗಳ ಪರಿವರ್ತನೆಗಾಗಿ.
- ಎಲ್ಲಾ ಮೂಲ ಸೌಲಭ್ಯ ಯೋಜನೆಗಳು, ನಿರ್ಮಾಣ ರಿಯಲ್ ಎಸ್ಟೇಟ್ ಕ್ಷೇತ್ರ, ವ್ಯಾಪಾರ ಚಟುವಟಿಕೆಗಳು, ಕಲ್ಯಾಣ ಮಂಟಪ, ಹೋಟೇಲ್, ವಸತಿ ಹಾಗೂ ಉಪಹಾರ ಗೃಹಗಳು, ಹಾಸ್ಪಿಟಲ್, ನರ್ಸಿಂಗ್ ಹೋಮ್, ವಸತಿ ಮತ್ತು ವಾಣಿಜ್ಯ ಕಟ್ಟಡಗಳು.
- ವ್ಯವಹಾರ / ವ್ಯಾಪಾರ ಚಟುವಟಿಕೆಗಳು.
- ಸಿನಿಮಾ ಮಂದಿರಗಳು ಹಾಗೂ ಮಾಲ್‌ಗಳು
- ಸಾರಿಗೆ ವಾಹನಗಳು, ನಿರ್ಮಾಣ ಉಪಕರಣಗಳು.
- ಕರ್ನಾಟಕ ಕೈಗಾರಿಕಾ ನೀತಿ 2020–25 ಅನುಬಂಧ 2 ರಲ್ಲಿ ಅಥವಾ ಅನಂತರದ ಜಾರಿಯಲ್ಲಿರುವ ಕೈಗಾರಿಕಾ ನೀತಿಯಲ್ಲಿ ಪ್ರೋತ್ಸಾಹಧನ ಹಾಗೂ ರಿಯಾಯಿತಿಗಳಿಗೆ ಅನರ್ಹವಾದ ಕೈಗಾರಿಕಾ ಚುಟುವಟಿಕೆಗಳು / ಘಟಕಗಳು.
- ಮೇಲೆ ನಿರ್ದಿಷ್ಟವಾಗಿ ತಿಳಿಸಿಲ್ಲದ ಇನ್ನಿತರೆ ಉತ್ಪಾದನಾ ಹೊರತು ಪಡಿಸಿದ ಚಟುವಟಿಕೆಗಳು.

*Gross Block ಸ್ವಂತ ಸ್ವಾಧೀನ / ಬ್ಯಾಂಕ್ / ಹಣಕಾಸು ಸಂಸ್ಥೆಗಳ ನೆರವಿನಿಂದ ಪಡೆದು ಪ್ರಸ್ತುತ ಹೊಂದಿರುವ ಎಲ್ಲಾ ಯಂತ್ರೋಪಕರಣಗಳ (ನೇರವಾಗಿ ಉತ್ಪಾದನೆಯಲ್ಲಿ ತೊಡಗಿರುವ) ಒಟ್ಟು ಮೂಲ ಖರೀದಿ / ಸರಕು / ಪಟ್ಟಿ ಮೌಲ್ಯ ಹಾಗೂ ಪ್ರಸ್ತುತ ಯೋಜನೆಯಡಿಯಲ್ಲಿ ಖರೀದಿಸಲು ಉದ್ದೇಶಿಸಿರುವ ಯಂತ್ರೋಪಕರಣಗಳು ಒಟ್ಟಾರೆ ರೂ.500.00 ಲಕ್ಷಗಳ ಮಿತಿಯನ್ನು ಎಂಎಸ್ಎಮ್ಇಡಿ ಕಾಯ್ದೆ 2006ರ ಅನ್ವಯ (MSMED Act 2006) ಒಳಗೊಂಡಿರಬೇಕು.

**ವಿಶೇಷ ಸೂಚನೆ :**
**ಸರ್ಕಾರದ ಹಾಗೂ ಸಂಸ್ಥೆಯ ಮಾರ್ಗಸೂಚಿಗನುಗುಣವಾಗಿ ಕಾಲ ಕಾಲಕ್ಕೆ ಯೋಜನೆಗಳಲ್ಲಿ ಬದಲಾವಣೆಗಳಾಗಬಹುದು.**
**ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಶಾಖಾ ಕಛೇರಿಯನ್ನು ಸಂಪರ್ಕಿಸಬಹುದು.**



# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ,

ಪ್ರಧಾನ ಕಛೇರಿ : ಕೆಎಸ್‌ಎಫ್‌ಸಿ ಭವನ, ನಂ.1/1, ತಿಮ್ಮಯ್ಯ ರಸ್ತೆ, ಬೆಂಗಳೂರು - 560 052.
ದೂರವಾಣಿ : 080-22263322, Fax : 080-22250126/136
E-Mail : bdcr@ksfc.co   Website : www.ksfc.government.gov.in

## ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಶಾಖೆಗಳು ಕಾರ್ಯನಿರತವಾಗಿವೆ.

| ಶಾಖಾ ಕಛೇರಿಗಳು | ದೂರವಾಣಿ ಸಂಖ್ಯೆ | ಶಾಖಾ ಕಛೇರಿಗಳು | ದೂರವಾಣಿ ಸಂಖ್ಯೆ |
|---|---|---|---|
| ಪ್ರಧಾನ ವ್ಯವಸ್ಥಾಪಕರು ವೃತ್ತ - I | 080-22208719 | ಪ್ರಧಾನ ವ್ಯವಸ್ಥಾಪಕರು ವೃತ್ತ - III | 080-22250133 |
| ಬೆಂಗಳೂರು ಜಯನಗರ | 080-26653446/7/8/ 9 | ಧಾರವಾಡ | 0836-2322235 / 2322236 |
| ಬೆಂಗಳೂರು ಗ್ರಾಮಾಂತರ | 080-23197995/23197996 | ಗದಗ | 08372-220502/220541 |
| ಬೆಂಗಳೂರು ಕೇಂದ್ರಿಯ | 080-22265881 | ಬೆಳಗಾವಿ | 0831-2426369 / 2427043 |
| ಬೆಂಗಳೂರು ರಾಜಾಜಿನಗರ | 080-23494628/23495821/12 | ಬಾಗಲಕೋಟೆ | 08354-235482 |
| ರಾಮನಗರ | 080-27274401/02 | ಕಾರವಾರ | 08382-221006 / 221888 |
| ಚಿಕ್ಕಬಳ್ಳಾಪುರ | 08156-270117 | ಹಾವೇರಿ | 08375-232362 / 233772 |
| ತುಮಕೂರು | 0816-2280089 | ಶಿವಮೊಗ್ಗ | 08182-229236 |
| ಕೋಲಾರ | 0815-2224757 / 222661 | ಚಿತ್ರದುರ್ಗ | 08194-224411 / 224410 |
| ಪ್ರಧಾನ ವ್ಯವಸ್ಥಾಪಕರು ವೃತ್ತ - II | 080-22261483 | ಪ್ರಧಾನ ವ್ಯವಸ್ಥಾಪಕರು ವೃತ್ತ - IV | 080-22250138 |
| ಮೈಸೂರು | 0821-2344930 / 2344531 | ಕಲಬುರಗಿ | 08472-222394 / 221407 |
| ಮಂಡ್ಯ | 08232-226745 / 225496 | ದಾವಣಗೆರೆ | 08192-225049/225660 |
| ಮಡಿಕೇರಿ | 08272-228588 / 228143 | ಬಳ್ಳಾರಿ | 08392-242719 / 242105 |
| ಚಾಮರಾಜನಗರ | 08226-222150 / 222801 | ವಿಜಯಪುರ | 08352-276102 |
| ಮಂಗಳೂರು | 0824-2443051 | ರಾಯಚೂರು | 08532-227028 / 232111 |
| ಉಡುಪಿ | 0820-2524033 | ಬೀದರ್ | 08482-228236 / 226381 |
| ಹಾಸನ | 08172-268703 / 265429 | ಯಾದಗಿರಿ | 08473-250375 / 250070 |
| ಚಿಕ್ಕಮಗಳೂರು | 08262-230447 / 234045 | ಕೊಪ್ಪಳ | 08539-225004 / 225005 |

ಶಾಖಾ ಕಛೇರಿ :